# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು**

**ವಿಷಯದ ಸಂಖ್ಯೆ:9/08–09**

Providing Asphalting to un-asphalted roads / concreting narrow roads / surfacing selected roads including drainage sidewalks in Bangalore in Ward No-68 (Package -IV, Stage - I) ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Providing Asphalting to un-asphalted roads / concreting narrow roads / surfacing selected roads including drainage sidewalks in Bangalore in Ward No-68 (Package -IV, Stage - I) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-1) ರವರು ಐದನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ಗಳು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-1) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎ. ಮುನಿರೆಡ್ಡಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.112.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಮಾನ್ಯ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.1,11,84,306.00 ಗಳಾಗಿದ್ದು, ಗುತ್ತಿಗೆದಾರರಾದ ಶ್ರೀ.ಎ. ಮುನಿರೆಡ್ಡಿ, ರವರು ಶೇಕಡ 33.49% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-1) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 22.31% ರಷ್ಟು ಹೆಚ್ಚುವರಿ ದರಗಳನ್ನು ನಮೂದಿಸಿರುತ್ತಾರೆ. ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ದರಗಳಾದ ಶೇಕಡ 22.31% ರಷ್ಟು ಹೆಚ್ಚಿನ ದರಗಳನ್ನು ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿ (2007–08) ಹೋಲಿಸಿದಾಗ ಶೇಕಡ 13.96% ರಷ್ಟು ಹೆಚ್ಚಿನ ದರಗಳು ಅಥವಾ ರೂ.1,36,79,808.00 ಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,36,79,808.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ: 24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. ಎ. ಮುನಿರೆಡ್ಡಿ, ರವರು 2007–08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 13.96 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,36,79,808.00 (ರೂ.ಒಂದು ಕೋಟಿ ಮೂವತ್ತಾರು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಎಂಟುನೂರ ಎಂಟು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೆಂಗಳೂರು ಮಹಾನಗರ ಪಾಲಿಕೆ

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು

**ವಿಷಯದ ಸಂಖ್ಯೆ:53/2008–09**

Ward No-76 ರ ಮಗರತ್ ರಸ್ತೆಯಲ್ಲಿರುವ ವಾಣಿಜ್ಯ ಸಂಕೀರ್ಣದ ವಾಹನ ನಿಲುಗಡೆ ಬಗ್ಗೆ.

**ಪ್ರಸ್ತಾವನೆ:**

ವಾರ್ಡ್–76ರ ಮಗರತ್ ರಸ್ತೆಯಲ್ಲಿರುವ ಪಾಲಿಕೆಯ ಸ್ವತ್ತಿನಲ್ಲಿ ಜಂಟಿ ಸಹಭಾಗಿತ್ವದಡಿಯಲ್ಲಿ ಮೆ॥ ಮೆವರಿಕ್ ಹೋಲ್ಡಿಂಗ್ ಪ್ರೈ. ಲಿ. ರವರು ವಾಣಿಜ್ಯ ಸಂಕೀರ್ಣ ಹಾಗೂ ಬಹು ಅಂತಸ್ತಿನ ವಾಹನ ನಿಲುಗಡೆ ಸಂಕೀರ್ಣವನ್ನು ನಿರ್ಮಿಸಲಾಗಿದ್ದು, ಪಾಲಿಕೆಗೆ ಸೇರಿದ ವಾಣಿಜ್ಯ ಸಂಕೀರ್ಣದ ಭಾಗವನ್ನು ಸದರಿ ಜಂಟಿ ಸಹಭಾಗಿತ್ವದಾರರಿಗೆ ನಿರ್ವಹಿಸಲು ಕರಾರನ್ನು ಮಾಡಿಕೊಳ್ಳಲಾಗಿದೆ. ಅದರಂತೆ ಸದರಿ ಕಟ್ಟಡದಲ್ಲಿ ಬರುವ ಸಾರ್ವಜನಿಕರ ಉಪಯೋಗಕ್ಕೆ ನಿರ್ಮಿಸಲಾಗಿರವ 500 ನಾಲ್ಕು ಚಕ್ರದ ವಾಹನ ನಿಲುಗಡೆ ಸ್ಥಳವನ್ನು ಎರಡು ವರ್ಷಗಳು ನಿರ್ವಹಿಸಲು ಕರಾರು ಮಾಡಿಕೊಂಡಿದ್ದು, ಸದರಿ ಕರಾರು ದಿನಾಂಕ:01/03/2006 ರಿಂದ 28/02/2008 ರವರೆವಿಗೆ ಇದ್ದು ಕರಾರಿನ ಷರತ್ತಿನಂತೆ ಪಾಲಿಕೆಗೆ ಶೇಕಡ 51 ಮತ್ತು ಮೆ॥ ಮೆವರಿಕ್ ಹೋಲ್ಡಿಂಗ್ ಪ್ರೈ. ಲಿ. ರವರಿಗೆ ಶೇಕಡ 49ನ್ನು ನಿಗಧಿಪಡಿಸಲಾಗಿದ್ದು, ಅದರಂತೆ ಸಾರ್ವಜನಿಕರ 500 ವಾಹನ ನಿಲುಗಡೆ ಶುಲ್ಕದಿಂದ ಬರುವ ಮೊತ್ತದಲ್ಲಿ ಕರಾರಿನಂತೆ ಶೇಕಡವಾರು ಮೊತ್ತವನ್ನು ಪಾಲಿಕೆಗೆ ಸಂದಾಯ ಮಾಡುತ್ತಿರುತ್ತಾರೆ. ಆದರೆ, ಸದರಿ ಕರಾರು ದಿನಾಂಕ:28/02/2008 ರಂದು ಅಂತಿಮಗೊಳ್ಳುತ್ತಿರುವುದರಿಂದ ಹಾಗೂ ಹಿಂದಿನ ಆಯುಕ್ತರು ಸದರಿ ವ್ಯವಸ್ಥೆಯನ್ನು ದಿನಾಂಕ:01/03/2008 ರಿಂದ ಟೆಂಡರ್ ಮುಖೇನ ಹಂಚಿಕೆ ಮಾಡಲು ಆದೇಶಿಸಿರುತ್ತಾರೆ.

ಅದರಂತೆ ವಿಶೇಷ ಆಯುಕ್ತರು (ಆಡಳಿತ) ರವರು ಸದರಿ ಸ್ಥಳವನ್ನು ದಿನಾಂಕ:31/01/2008 ರಂದು ಸ್ಥಳ ಪರಿಶೀಲನೆ ಮಾಡಿ ಆಯುಕ್ತರೊಂದಿಗೆ ಚರ್ಚಿಸಿ ಕೆ.ಟಿ.ಟಿ.ಪಿ. ಕಾಯ್ದೆಯಡಿಯಲ್ಲಿ ಟೆಂಡರ್ ಆಹ್ವಾನಿಸಲು ಆದೇಶಿಸಿದ್ದು ಈ ಅನುಸಾರ ಟೆಂಡರ್ ದಾಖಲಾತಿಗಳನ್ನು ಸಹ ಸಿದ್ದಪಡಿಸಲು ಸೂಚಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಆದೇಶಿಸಿರುವಂತೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಟೆಂಡರ್ ದಾಖಲಾತಿಯಲ್ಲಿ ಷರತ್ತು ಹಾಗೂ ನಿಬಂಧನೆಗಳನ್ನು (Terms and conditions) ಮಾಡುವ ಮುನ್ನ ಈ ಕೆಳಕಂಡ ಮುಖ್ಯ ಅಂಶಗಳನ್ನು ಗಮನಿಗೆ ತೆಗೆದುಕೊಂಡು ಟೆಂಡರ್ ಮಾಡುವ ಮುನ್ನ ತಾಂತ್ರಿಕ ಸಲಹೆ ಪಡೆಯುವುದು ಅವಶ್ಯಕತೆ ಕಂಡು ಬಂದಿತು.

1. ಸದರಿ ಕಟ್ಟಡವು 14 ಅಂತಸ್ತುಗಳಿದ್ದು ಲೋಯರ್ ಬೇಸ್‌ಮೆಂಟ್, ಅಪ್ಪರ್ ಬೇಸ್‌ಮೆಂಟ್, ನೆಲಮಹಡಿ ಮತ್ತು 11 ಮೇಲು ಅಂತಸ್ತುಗಳನ್ನೊಳಗೊಂಡ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡದಲ್ಲಿ ಒಟ್ಟು 972 ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಈ 972 ರಲ್ಲಿ 220 ಡೆವಲಪ್ಪರ್ ಷೇರು, 252 ಪಾಲಿಕೆಯ ಭಾಗವನ್ನು ಸಹ ಡೆವಲಪ್ಪರ್‌ದಾರರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಉಳಿಕೆ 500 ಸಾರ್ವಜನಿಕ 4 ಚಕ್ರದ ವಾಹನಗಳ ನಿಲುಗಡೆಯಾಗಿರುತ್ತದೆ. ಈ 500 ಸಾರ್ವಜನಿಕ ವಾಹನಗಳ ನಿಲುಗಡೆ ಸ್ಥಳಕ್ಕೆ ದಿನಾಂಕ:01/03/2008 ರಿಂದ ಟೆಂಡರ್ ಅನ್ನು ಆಹ್ವಾನಿಸಬೇಕಾಗಿರುತ್ತದೆ. ಈ 500 ಸಾರ್ವಜನಿಕರ ವಾಹನ ನಿಲುಗಡೆ ಸ್ಥಳವು ಕಟ್ಟಡದ ಲೋಯರ್ ಬೇಸ್‌ಮೆಂಟ್‌ನಲ್ಲಿ – 178, ಅಪ್ಪರ್ ಬೇಸ್‌ಮೆಂಟ್‌ನಲ್ಲಿ – 173, 1ನೇ ಮಹಡಿಯಲ್ಲಿ – 20, 7ನೇ ಮಹಡಿಯಲ್ಲಿ – 43, 8ನೇ ಮಹಡಿಯಲ್ಲಿ – 43 ಮತ್ತು 9ನೇ ಮಹಡಿಯಲ್ಲಿ – 43 ಆಗಿದ್ದು, ಬೇರೆ ಬೇರೆ ಅಂತಸ್ತುಗಳಲ್ಲಿ ಇರುತ್ತವೆ. (As Per Agreement).

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2007–08ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2008–09ನೇ ಸಾಲಿನ ಆಯವ್ಯಯ ಮಂಡನೆ ಸಭೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 17.04.08ರ ನಡವಳಿಗಳು**

ವಿಷಯದ ಸಂಖ್ಯೆ:597ಬಿ/07–08

2008–09ನೇ ಸಾಲಿನ ಆದಾಯ ಮತ್ತು ವೆಚ್ಚಗಳ ಲೇಖಾನುದಾನ ಅನುಮೋದನೆ ಬಗ್ಗೆ.

ಪ್ರಸ್ತಾವನೆ:

2007–08ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಮತ್ತು 2008–09ನೇ ಸಾಲಿನ ಕರಡು ಆಯವ್ಯಯವನ್ನು ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಅನುಮೋದನೆಗಾಗಿ ಮಂಡಿಸಿದ್ದು, ಅನುಮೋದನೆಯಾದ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆ 1976 ಸೆಕ್ಷನ್ 170(1) ಮತ್ತು (2) ರ ಅನ್ವಯ ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆಯಬೇಕಾಗಿರುವ ಪ್ರಯುಕ್ತ ಸರ್ಕಾರದ ಅನುಮೋದನೆ ಕಾಯ್ದಿರಿಸಿ, ಪಾಲಿಕೆಯ ಅವಶ್ಯಕ ವೆಚ್ಚಗಳಾದ ವೇತನ, ಪಿಂಚಣಿ, ನಿರ್ವಹಣೆ ಮತ್ತು ಇತರೆ ಬಿಲ್ಲುಗಳ ಪಾವತಿಗೆ ಆಯವ್ಯಯದ ಶೇಕಡ 30 ರಷ್ಟು ಅನುದಾನವನ್ನು ಖರ್ಚು ಮಾಡಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27/03/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:27/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು

ವಿಷಯ ಸಂಖ್ಯೆ:27/2008–09

ಬಳ್ಳಾರಿ ರಸ್ತೆಯ ಸರಪಳಿ 1.20 ಕಿ.ಮೀ. ನಿಂದ 1.40 ಕಿ.ಮೀ ವರೆಗೆ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

[illegible]:

ಬಳ್ಳಾರಿ ರಸ್ತೆಯ ಸರಪಳಿ 1.20 ಕಿ.ಮೀ. ನಿಂದ 1.40 ಕಿ.ಮೀ ವರೆಗೆ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.89.00 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕ:21/01/08 ರಂದು [illegible]ಂದ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 23/01/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ. ಜಿ. ಜಯರಾಮ್ ಮತ್ತು ಶ್ರೀ. ಕೆ. ಸೋಮಪ್ಪ ಭಾಗವಹಿಸಿ ಅರ್ಹರಾಗಿರುತ್ತಾರೆ. ಸದರಿ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 04/02/08 ರಂದು ತೆರೆಯಲಾಗಿದ್ದು, ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ.

(1) ಶ್ರೀ. ಜಿ. ಜಯರಾಮ್ ರವರು ಒಟ್ಟು ರೂ.1,34,31,381.40 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.66.11% ರಷ್ಟು ಹೆಚ್ಚಾಗಿದ್ದು ಇದು 2007–08ನೇ ಸಾಲಿನ ದರ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸದ ದರಗಳಿಗೆ ಹೋಲಿಸಿದಾಗ ಶೇ. 56.47% ರಷ್ಟು ಹೆಚ್ಚಾಗಿರುತ್ತದೆ.
(2) ಶ್ರೀ. ಕೆ. ಸೋಮಪ್ಪ ರವರು ಒಟ್ಟು ರೂ.1,22,07,328.40 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.50.97% ರಷ್ಟು ಹೆಚ್ಚಾಗಿದ್ದು ಇದು 2007–08ನೇ ಸಾಲಿನ ದರ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸದ ದರಗಳಿಗೆ ಹೋಲಿಸಿದಾಗ ಶೇ.42.21% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಕೆ. ಸೋಮಪ್ಪ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಇವರನ್ನು 2007–08 ನೇ ಸಾಲಿನ ದರ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸದ ದರಗಳಿಗೆ ಹೋಲಿಸಿದಲ್ಲಿ ಶೇ.42.21% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುವುದರಿಂದ ದಿನಾಂಕ: 17/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.20.00% ಗೆ ಇಳಿಸಿ, ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಕೆ. ಸೋಮಪ್ಪ ರವರ ಗುತ್ತಿಗೆಯ ಮೊತ್ತ ರೂ.[illegible]921.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸದ ದರಗಳ ರೂ.85,84,100.00 ಗಳಿಗೆ ಹೋಲಿಸಿದಾಗ ಶೇ.20.00% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು**

**ವಿಷಯ ಸಂಖ್ಯೆ:29/2008–09**

ಸಂಪಿಗೆ ರಸ್ತೆಯಲ್ಲಿನ ಸಂಪಿಗೆ ಚಿತ್ರಮಂದಿರ ದಿಂದ (ಮಲ್ಲೇಶ್ವರಂ ತಳಹಾದಿ) ಸರ್ಕಲ್ ಮಾರಮ್ಮ ದೇವಸ್ಥಾನದ ವರೆಗೆ Chainage 1300 – 3200 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.97.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:319/2007–08, ದಿನಾಂಕ:29/12/2007 ರಲ್ಲಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ರೂ.94.20 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕ:17/03/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 17/03/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ ಬಿ.ಎಂ.ಚಂದ್ರಯ್ಯ ಮತ್ತು ಶ್ರೀ ಮುನಿರತ್ನ ರವರು ಅರ್ಹರಾದ ಗುತ್ತಿಗೆದಾರರಾಗಿರುತ್ತಾರೆ. ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 27/03/08 ರಂದು ತೆರೆಯಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಬಿ.ಎಂ.ಚಂದ್ರಯ್ಯ ರವರು ಒಟ್ಟು ರೂ. 1,69,62,750.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.80.19% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.48.72% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ ಮುನಿರತ್ನ ರವರು ಒಟ್ಟು ರೂ.1,67,10,010.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.77.51% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.46.51% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಮುನಿರತ್ನ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.46.51% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ: 31/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರ ಶೇ.46.51% ಗಳನ್ನು ಶೇ.14.95% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತ ರೂ.1,31,15,217.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ.1,14,05,528.00 ಗಳಿಗೆ ಹೋಲಿಸಿದಾಗ ಶೇ.14.95% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು

**ವಿಷಯ ಸಂಖ್ಯೆ:30/2008–09**

ಸಂಪಿಗೆ ರಸ್ತೆಯಲ್ಲಿನ ದೀನಬಂಧು ರಸ್ತೆಯಿಂದ ಸಂಪಿಗೆ ಚಿತ್ರಮಂದಿರದ ವರೆಗೆ (ಮಲ್ಲೇಶ್ವರಂ ತಳಹಾದಿ) Chainage 0– 1300 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.94.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:319/2007–08, ದಿನಾಂಕ:29/12/2007 ರಂದು ನೀಡಿರುತ್ತಾರೆ. ಸದರಿ ಕಾಮಗಾರಿಗೆ ರೂ.91.40 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕ:17/03/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 17/03/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ ಬಿ.ಎಂ.ಚಂದ್ರಯ್ಯ ಮತ್ತು ಶ್ರೀ ಮುನಿರತ್ನ ರವರು ಗುತ್ತಿಗೆದಾರರು ಅರ್ಹರಾಗಿರುತ್ತಾರೆ. ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 27/03/08 ರಂದು ತೆರೆಯಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಬಿ.ಎಂ.ಚಂದ್ರಯ್ಯ ರವರು ಒಟ್ಟು ರೂ.1,64,17,550.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.79.91% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.48.49% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ ಮುನಿರತ್ನ ರವರು ಒಟ್ಟು ರೂ.1,61,73,290.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.77.23% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.46.28% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಮುನಿರತ್ನ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು,2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.46.28% ರಷ್ಟು ಹೆಚ್ಚಿನ ದರವನ್ನು ನಮೂದಿಸಿರುವುದರಿಂದ, ದಿನಾಂಕ: 01/02/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರ ಶೇ.46.28% ಗಳನ್ನು ಶೇ.14.99% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಮುನಿರತ್ನ ರವರ ಗುತ್ತಿಗೆಯ ಮೊತ್ತ ರೂ.1,27,13,324.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ.1,10,56,026.00 ಗಳಿಗೆ ಹೋಲಿಸಿದಾಗ ಶೇ.14.99% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

78 ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು

ವಿಷಯ: ಸಂಖ್ಯೆ:34/2008-09

Providing utility cable ducts & chambers for BESCOM & other utility cables in Race course road from 0.30 Km to 1.66 Km on North side in Bangalore ಕಾಮಗಾರಿಯ ಬಗ್ಗೆ.

ಪ್ರಸ್ತಾವನೆ:

Providing utility cable ducts & chambers for BESCOM & other utility cables in Race course road from 0.00 Km to 1.66 Km on North side in Bangalore ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.93.05ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಅಂದಾಜುಪಟ್ಟಿಯ ಪ್ರಕ್ರಿಯೆಯನ್ನು ಕೈಗೊಂಡಿದ್ದು ಸದರಿ ಟೆಂಡರಿನಲ್ಲಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು. ಅವರುಗಳು 1) ಶ್ರೀ.ಎಸ್.ಸಿ. ರಮೇಶ್, 2) ಶ್ರೀ. ಜಿ.ಓ.ವಿಜಯನಗೌಡ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 25/03/08 ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ.

(1) ಶ್ರೀ. ಎಸ್.ಸಿ. ರಮೇಶ್ ರವರು ಒಟ್ಟು ರೂ.1,25,10,846.00 ನಮೂದಿಸಿದ್ದು, 07-08ನೇ ಸಾಲಿನ ದರ ಪಟ್ಟಿಗೆ ಶೇ.34.45% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ. ಜಿ.ಓ.ವಿಜಯನಗೌಡ ರವರು ಒಟ್ಟು ರೂ.1,75,24,482.00 ನಮೂದಿಸಿದ್ದು, 07-08ನೇ ಸಾಲಿನ ದರ ಪಟ್ಟಿಗೆ ಶೇ.88.33% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಎಸ್.ಸಿ. ರಮೇಶ್ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007-08ನೇ ಸಾಲಿನ ದರಸೂಚಿಗೆ ಹೋಲಿಸಿದಲ್ಲಿ ಶೇ. 34.45% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ:02/04/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.34.45% ರಿಂದ ಶೇ.19.50% ಕ್ಕೆ ಇಳಿಸಿ, ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಎಸ್.ಸಿ. ರಮೇಶ್ ರವರ ಗುತ್ತಿಗೆಯ ಮೊತ್ತ ರೂ.1,11,19,516.00 ಗಳಾಗಿದ್ದು, ಇದನ್ನು 07-08ನೇ ಸಾಲಿನ ದರ ಸೂಚಿ ಮೊತ್ತ ರೂ.93,05,035.00 ಗಳಿಗೆ ಹೋಲಿಸಿದಾಗ ಶೇ.19.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು